ಅದಕ್ಕಿಂತ ಕಡಿಮೆ. ಎದುರಿಗೆ ಮಹಾನದಿ. ನದಿಯ ತುಂಬೆಲ್ಲಾ ನೂರಾರು ದೋಣಿಗಳು. ದೋಣಿಗಳು ಸ್ಲೋ-ಮೋಶನ್‌ನಲ್ಲಿ ಚಲಿಸುತ್ತಿದ್ದವು. ದೋಣಿಗಳ ಮೇಲೆ ಬೆಳ್ಳನೆ ಕೊಕ್ಕರೆಗಳು ಸಾಲಾಗಿ ಹಾರುತ್ತಿದ್ದವು. 'ನನಗೀಗ ಐಸ್ ಕ್ರೀಮ್ ತಿನ್ನಬೇಕೆನಿಸುತ್ತಿದೆ' ಎನ್ನುತ್ತಾಳೆ ಪಕ್ಕದಲ್ಲಿ ಕುಳಿತಿದ್ದ ಗಂಡನೊಂದಿಗೆ. ಇಡೀ ತೆರೆಯ ಮೇಲೆ ಅವರಿಬ್ಬರೇ. ಮನೋರಂಜನಿ ಆಕೆಯ ಗಂಡ. ಇಬ್ಬರೂ... ಒಬ್ಬರನ್ನೊಬ್ಬರು ನೋಡುತ್ತಾ, ಮೂವತ್ತು ವರ್ಷಗಳ ಹಿಂದಿನ ಬದುಕನ್ನು ನೆನಪಿಗೆ ತಂದುಕೊಳ್ಳತೊಡಗಿದರು.

'ನಾವೀಗ ಒಂದು ಫ್ಲಾಶ್‌ಬ್ಯಾಕನ್ನು ನೋಡುತ್ತಿದ್ದೇವೆ. ಅವರಿಬ್ಬರ ಗತವನ್ನು ತೋರಿಸುತ್ತಿದ್ದಾರೆ' ಎಂದ ಗೈಡ್. ಇಪ್ಪತ್ತೈದು ವರ್ಷಗಳ ಮನೋರಂಜನಿ ಅಹಂನಿಂದ ಬೀಗುತ್ತಿದ್ದಾಳೆ. ಪಕ್ಕದಲ್ಲಿ ನಡೆಯುತ್ತಿರುವ ಮಹಂತಿ. ಆಕೆಯ ಕಣ್ಸನ್ನೆಯಲ್ಲಿ ನಡೆಯುತ್ತಾ ಆಕೆಯನ್ನು ಆಕರ್ಷಿಸಬೇಕೆಂದು ಯೋಚಿಸುತ್ತಿದ್ದ. ತನ್ನ ಕನಸಿನ ತುಂಬಾ ಮನಸ್ಸಿನ ತುಂಬಾ ಆಕೆಯೇ ಇದ್ದಾಳೆಂದು ವಿವರಿಸಲು ಪ್ರಯತ್ನಿಸುತ್ತಿದ್ದ. ಆದರೆ ಪ್ರೀತಿಸೋದು ಹಿಂದೆ ಬೀಳೋದು ಗಂಡಸರ ಜನ್ಮಲಕ್ಷಣವೆಂದು ಹೇಳುತ್ತಿದ್ದಾಳೆ ಮನೋರಂಜನಿ. 'ಗಂಡಸರು ಮದವೇರಿದ ಮೃಗಗಳಂಥವರು, ಬಯಕೆ ತೀರುವವರೆಗೆ ಈ ಪ್ರೀತಿ ಪ್ರೇಮ, ಹಿಂದೆ ಬೀಳೋದು' ಎಂದಳು. ಅವನು 'ನನ್ನ ಪ್ರೀತಿ ನಿಜವಾದದ್ದು. ದೇವರ ಇರುವಿಕೆಯಂಥದ್ದು' ಎಂದು ಆಕೆಯ ಹಿಂದೆ ಬೀಳುತ್ತಾನೆ. ಎರಡು ರೀಲುಗಳ ಮಟ್ಟಿಗೆ ಈ ಹಿಂದೆ ಬೀಳುವಿಕೆ ಮುಗಿದ ನಂತರ ಕಟ್ಟಕಡೆಗೆ ಆಕೆ ಮದುವೆಗೆ ಒಪ್ಪಿಕೊಳ್ಳುತ್ತಾಳೆ.

ಹತ್ತಿರದ ಪಟ್ಟಣದಲ್ಲಿ ಅವನ ಉದ್ಯೋಗ. ಆಕೆಗೆ ಮಕ್ಕಳೆಂದರೆ ತುಂಬಾ ಇಷ್ಟ. 'ನಮಗೆ ಮಕ್ಕಳು ಬೇಡ' ಎನ್ನುತ್ತಾನೆ ಅವನು. 'ಮಕ್ಕಳು ಹುಟ್ಟಿದರೆ ನಿನ್ನ ಸೌಂದರ್ಯ ಹಾಳಾಗುತ್ತದೆ. ನೀನು ಮುದುಕಿಯಾಗಿಬಿಡುತ್ತೀಯ. ಎಂದಿಗೂ ನೀನು ಮನೋರಂಜನಿಯಂತಿರಬೇಕು' ಎನ್ನುತ್ತಾನೆ. ಆಕೆ ಒಪ್ಪಿಕೊಳ್ಳುತ್ತಾಳೆ. ಮಕ್ಕಳು ಹುಟ್ಟದಿದ್ದರೂ ಆಕೆ ತನ್ನ ವಯಸ್ಸಿನ ಬದಲಾವಣೆಗಳನ್ನು ಮರೆ ಮಾಚಲು ವಿಫಲಳಾಗುತ್ತಾಳೆ. ಕೆನ್ನೆಗಳು ಜೋಲುತ್ತವೆ. ತಲೆಗೂದಲು ತೆಳುವಾಗುತ್ತವೆ. ಗಲ್ಲದ ನುಣುಪು ಮಾಯವಾಗುತ್ತದೆ. ದೇಹ ಸಡಿಲಗೊಳ್ಳುತ್ತದೆ. 'ನಿನ್ನಲ್ಲಿಯ ಆಕರ್ಷಣೆ ಹಾರಿ ಹೋಗಿದೆ. ನೀನೀಗ ಸಾಮಾನ್ಯ ಹೆಂಗಸು' ಎನ್ನುತ್ತಾನೆ. ಅವನು ಕ್ರಮೇಣ ಆಕೆಯಿಂದ ದೂರವಾಗುತ್ತಾನೆ. ಒಬ್ಬಳೇ ಆ ಮನೆಯಲ್ಲಿ ತನಗೆ ತಾನೇ ಬಂದಿಯಾಗಿ. ಇಪ್ಪತ್ತಕ್ಕೂ ಹೆಚ್ಚು ವರ್ಷಗಳನ್ನು ಕಳೆಯುತ್ತಾಳೆ. ಅವನು ಆ ಮನೆಯನ್ನು ಆಕೆಯನ್ನು ಮರೆತು ಹೋಗುತ್ತಾನೆ. ಅವನಿಗೆ ಸಾಕಷ್ಟು ಜನ ಪ್ರಿಯತಮೆಯರು. ತಲೆಗೂದಲಿಗೆ ಬಣ್ಣ ಹಾಕಿ, ಬಣ್ಣ ಬಣ್ಣದ ಶರಟುಗಳನ್ನು ಹಾಕಿಕೊಂಡು ವಯಸ್ಸನ್ನು ಗೆಲ್ಲಬೇಕೆಂದಿರುತ್ತಾನೆ. ತನ್ನ ಐವತ್ತನೆಯ ಜನ್ಮದಿನದಂದು ಇಪ್ಪತ್ತೈದು ವರ್ಷದ ಹುಡುಗಿಯೊಂದಿಗೆ ಹನಿಮೂನ್ ಮಾಡುತ್ತಿರುವಾಗ ಹೆಂಡತಿಗೆ ಸೀರಿಯಸ್ ಎಂಬ ಸುದ್ದಿ ಬರುತ್ತದೆ. ಅವನು ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಆ ರಾತ್ರಿ ಒಂದು ವಿಚಿತ್ರ ನಡೆಯುತ್ತದೆ. ಪ್ರಿಯತಮೆಯೊಂದಿಗೆ ಬೆತ್ತಲಾಗಿ ಮಂಚದ ಮೇಲೆ ಮಲಗಿದ್ದ ಸಮಯದಲ್ಲಿ ಅವನ ದೇಹದ ಮೇಲೆ ದಿಢೀರನೆ ಸುಕ್ಕುಗಳೂ ಬರುತ್ತವೆ. ಅವನ ದೇಹ ಪ್ರಾಣಿಯ ದೇಹದಂತೆ ಕಪ್ಪಗೆ ದಪ್ಪವಾಗಿ ಬಿಡುತ್ತದೆ. ಮುಖ ಕಾಂತಿಹೀನವಾಗಿ ಬಿಳಚಿಕೊಂಡು ಒಮ್ಮೆಲೇ ಅವನಲ್ಲಿ ವೃದ್ಧಾಪ್ಯ ಆವರಿಸುತ್ತದೆ. ಪಕ್ಕದಲ್ಲಿ ಮಲಗಿದ್ದ ಹುಡುಗಿ ಭಯದಿಂದ ಕಿರುಚುತ್ತಾ ಓಡಿ ಹೋಗುತ್ತಾಳೆ.

'ನಾವು ಮತ್ತೇ ವರ್ತಮಾನಕ್ಕೆ ಬರೋಣ. ಫ್ಲಾಶ್‌ಬ್ಯಾಕ್ ಮುಗಿದು ಹೋಯ್ತು' ಎಂದ ಗೈಡ್. ಮನೋರಂಜನಿ ಗಂಡ ನಿರ್ಜನವಾದ ಬೀದಿಗಳಲ್ಲಿ ಹೆಂಡತಿ ಕೇಳಿದ್ದ ಐಸ್‌ಕ್ರೀಮ್‌ಗಾಗಿ ಸುತ್ತುತ್ತಿರುತ್ತಾನೆ. ಅಂಗಡಿಗಳೆಲ್ಲಾ ಮುಚ್ಚಿದ್ದವು. ಮನೋರಂಜನಿ ಕಿಟಕಿಯಿಂದ ಮಹಾನದಿ ಕಡೆಗೆ ನೋಡುತ್ತಿದ್ದಳು. ನದಿ ದಡದಲ್ಲಿ ಅವರಿಬ್ಬರೂ ಪ್ರೀತಿಯಿಂದ ಒಬ್ಬರಿಗೊಬ್ಬರು ಭುಜಕ್ಕೆ ಒರಗಿಕೊಂಡು ಹೆಜ್ಜೆ ಹಾಕುತ್ತಿರುವ ದೃಶ್ಯ. ಆಗಲೂ ಹೀಗೆಯೇ ಐಸ್‌ಕ್ರೀಮ್ ತಂದು ಕೊಡಲು ಕೇಳುತ್ತಾಳೆ. ಆಕೆಯನ್ನು ನದಿದಡದಲ್ಲಿ ಬಿಟ್ಟು ಐಸ್‌ಕ್ರೀಮ್‌ಗಾಗಿ ಓಡಿದ ಕ್ಷಣ ನೆನಪಿಗೆ ಬರುತ್ತದೆ. ಆಕೆ ನದಿ ಕಡೆ ಹಾಗೆ ಅರೆಮುಚ್ಚಿದ ಕಣ್ಣಿನಿಂದ ನೋಡುತ್ತಿದ್ದಂತೆ ಅವನು ಐಸ್‌ಕ್ರೀಮ್‌ಗಾಗಿ ಬೀದಿಗಳಲ್ಲಿ ಓಡುತ್ತಿದ್ದರೆ... ಸಿನಿಮಾ ಮುಗಿಯುತ್ತದೆ.

ಥಿಯೇಟರ್‌ನಿಂದ ಹೊರಬರುತ್ತಾ ಸತ್ಯಸುಂದರ್